ಕರ್ನಾಟಕ ವಿಧಾನಸಭೆ

ಸೋಮವಾರ 27ನೇ ಜುಲೈ 2009ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆ 35 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಜಗದೀಶ್ ಶೆಟ್ಟರ್‌ರವರು) ಪೀಠವನ್ನು ಅಲಂಕರಿಸಿದ್ದರು.

1. ಸಂತಾಪ ಸೂಚನೆ

ವಿಷಯ: 1999ರ ಜುಲೈನಲ್ಲಿ ನಡೆದ ಕಾರ್ಗಿಲ್ ಯುದ್ಧದಲ್ಲಿ ಮಡಿದ ವೀರ ಯೋಧರ ಬಗ್ಗೆ.

ಮಾನ್ಯ ಸಭಾಧ್ಯಕ್ಷರು: 1999ರ ಮೇ, ಜುಲೈನಲ್ಲಿ ನಡೆದ ಕಾರ್ಗಿಲ್ ಯುದ್ಧದಲ್ಲಿ ಮಡಿದ ವೀರ ಯೋಧರ ಬಗ್ಗೆ ಹಾಗೂ ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಪ್ರಭಾಕರ ರಾವ್ ತೇಲ್ಕರ್ ಅವರು ನಿಧನ ಹೊಂದಿರುವ ಬಗ್ಗೆ ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

1. ಕಾರ್ಗಿಲ್ ಕಲಿಗಳಿಗೆ ಶ್ರದ್ಧಾಂಜಲಿ

1999ರ ಮೇ ತಿಂಗಳಿನಿಂದ ಜುಲೈ ತಿಂಗಳವರೆಗೆ ಭಾರತ ಪಾಕಿಸ್ತಾನಗಳ ನಡುವೆ 74 ದಿನಗಳು ನಿರಂತರವಾಗಿ ನಡೆದ ಕಾರ್ಗಿಲ್ ಯುದ್ಧದಲ್ಲಿ ಭಾರತವು ಜಯಿಸಿ ಜುಲೈ 26ಕ್ಕೆ 10 ವರ್ಷ ತುಂಬಿದೆ. ಅಂದರೆ ನಿನ್ನೆಯ ದಿನಕ್ಕೆ ಕಾರ್ಗಿಲ್ ವಿಜಯ ದಿವಸಕ್ಕೆ 10 ವರ್ಷ. ಕಾರ್ಗಿಲ್ ವಿಜಯ ಭಾರತದ ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ಉಳಿಯುವಂಥದ್ದು, ಈ ಸಮರದಲ್ಲಿ ದೇಶಕ್ಕಾಗಿ ತ್ಯಾಗ ಮಾಡಿ ಬಲಿಯಾದ ಯೋಧರ ಕೊಡುಗೆಗೆ ಯಾವುದೇ ಮೌಲ್ಯ ನೀಡಲು ಸಾಧ್ಯವಾಗದು. ಭವ್ಯ ಭಾರತದ ಭದ್ರತೆ, ಏಕತೆ ಹಾಗೂ ಸಮಗ್ರತೆಗಾಗಿ ನಮ್ಮ ಯೋಧಕರು ತಮ್ಮ ಪ್ರಾಣವನ್ನೇ ತೆತ್ತಿದ್ದಾರೆ, ಇವರ ಬಲಿದಾನ ಅಮರ. ಜಾಗತಿಕ ಮಟ್ಟದಲ್ಲಿ ತನ್ನ ಸ್ವಾಭಿಮಾನ ಹಾಗೂ ತನ್ನ ಪ್ರಜೆಗಳ ಅತ್ಮಾಭಿಮಾನವನ್ನು ಕಾಯ್ದಿರಿಸಿಕೊಂಡಿರುವ ನಮ್ಮ ದೇಶದ ಮುಂದಿನ ಪೀಳಿಗೆಗೆ ಕಾರ್ಗಿಲ್ ವಿಜಯ ದಿವಸ ರಾಷ್ಟ್ರ ಪ್ರೇಮವನ್ನು ಮತ್ತಷ್ಟು ಬೆಳೆಸುವ ಒಂದು ಸ್ಮರಣೀಯ ದಿವಸವೇ ಸರಿ. ಕಾರ್ಗಿಲ್ ಯುದ್ಧದ ಯೋಧರ ಬಲಿದಾನ ನಮ್ಮ ಪೀಳಿಗೆಗೆ ರಾಷ್ಟ್ರಾಭಿಮಾನವನ್ನು ತುಂಬುವ ಹಾಗೂ ರಾಷ್ಟ್ರಕ್ಕಾಗಿ ದುಡಿಯುವಂತೆ ಮಾಡುವ ಒಂದು ಅಮರ ಬಲಿದಾನ. ಆದುದರಿಂದ, ಈ ಸಂದರ್ಭದಲ್ಲಿ ಇಂತಹ ವೀರಯೋಧರನ್ನು ನೆನೆದು ಶ್ರದ್ಧಾಂಜಲಿ ಅರ್ಪಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ.

2. ಶ್ರೀ ಪ್ರಭಾಕರ ರಾವ್ ತೇಲ್ಕರ್

ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಪ್ರಭಾಕರ ರಾವ್ ತೇಲ್ಕರ್ ಅವರು 1931ನೇ ಅಕ್ಟೋಬರ್ 14ರಂದು ಜನಿಸಿದ್ದು, ಬಿ.ಎ. ಹಾಗೂ ಕಾನೂನು ಪದವೀಧರರು. ವೃತ್ತಿಯಲ್ಲಿ ವಕೀಲರಾಗಿದ್ದ ಶ್ರೀಯುತರು, ನಿಜಾಮ್ ಕಾಲೇಜು ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯಾಗಿ, ಜಿಲ್ಲಾ ಬಾರ್ ಅಸೋಸಿಯೇಷನ್ನಿನ ಕಾರ್ಯದರ್ಶಿಯಾಗಿ, ಶಾಲಾ ಅಭಿವೃದ್ಧಿ ಮಂಡಳಿಯ ಉಪಾಧ್ಯಕ್ಷರಾಗಿ, ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ 75ನೇ ಜನ್ಮ ದಿನೋತ್ಸವ ಆಚರಣಾ ಸಮಿತಿಯ ಅಧ್ಯಕ್ಷರಾಗಿ, ಕರ್ನಾಟಕ ರಾಜ್ಯ ಉಡುಪು ತಯಾರಿಕಾ ಉದ್ಯಮದ ಉದ್ಯೋಗಿಗಳಿಗೆ ಕನಿಷ್ಠ ವೇತನ ನಿಗದಿಪಡಿಸುವ ಸಮಿತಿಯ ಅಧ್ಯಕ್ಷರಾಗಿ ಹಾಗೂ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದ್ದರು. ಐದು ಹಾಗೂ ಏಳನೆ ವಿಧಾನಸಭೆಗೆ ಚಿತ್ತಾಪುರ ಕ್ಷೇತ್ರದಿಂದ ಚುನಾಯಿತರಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ 25–7–2009ರಂದು ನಿಧನ ಹೊಂದಿದರು.

ಶ್ರೀ ಬಿ.ಎಸ್ ಯಡಿಯೂರಪ್ಪ (ಮುಖ್ಯಮಂತ್ರಿಗಳು): ಸನ್ಮಾನ್ಯ ಅಧ್ಯಕ್ಷರೆ, ತಾವು ಕಾರ್ಗಿಲ್ ಯೋಧರ ಬಗ್ಗೆ ತಂದಿರುವ ಸಂತಾಪ ಸೂಚನೆ ನಿರ್ಣಯಕ್ಕೆ ಧ್ವನಿಗೂಡಿಸುತ್ತಾ, ಇಡೀ ದೇಶದಲ್ಲಿ ಈ ವೀರ ಯೋಧರ ಬಲಿದಾನವಾಯಿತು, ಅವರನ್ನು ನೆನಪು ಮಾಡಿಕೊಂಡು ಶ್ರದ್ಧಾಂಜಲಿಯನ್ನರ್ಪಿಸುವ ಕೆಲಸ ನಡೆದಿದೆ. 10 ವರ್ಷಗಳ ಹಿಂದೆ ಜುಲೈ 26ರಂದು ಕಾರ್ಗಿಲ್ ವಿಜಯವನ್ನು ನಾವು ಸಾಧಿಸಿದೆವು. ದೇಶದ ರಕ್ಷಣೆಗಾಗಿ 533 ಯೋಧರ ಬಲಿದಾನವಾಯಿತು. ಪ್ರತಿಕ್ಷಣ ನಮ್ಮ ಯೋಧರು ನಮ್ಮ ರಕ್ಷಣೆಗಾಗಿ ಗಡಿಯಲ್ಲಿ ನಿಂತು ಕಣ್ಣಲ್ಲಿ ಕಣ್ಣಿಟ್ಟು ಕಾಯುತ್ತಿರುವುದರಿಂದ ನಾವು ಇಲ್ಲಿ ನೆಮ್ಮದಿಯಿಂದಿದ್ದೇವೆ. ಕೊರೆಯುವ ಚಳಿಯಲ್ಲಿ, ಮೈನೆಸ್ ಡಿಗ್ರಿ ಸೆಂಟಿಗ್ರೇಡ್‌ನಲ್ಲಿ ನಮ್ಮ ಯೋಧರು ಪಡುತ್ತಿರುವ ಪರಿಶ್ರಮಕ್ಕೆ ಬೆಲೆ ಕಟ್ಟುವುದಕ್ಕಾಗುವುದಿಲ್ಲ. ಕಾರ್ಗಿಲ್ ನೆನಪಾಗುತ್ತಿದ್ದ ಹಾಗೆ ತಕ್ಷಣ ನಮ್ಮ ಯುವಕರಲ್ಲಿ ರೋಮಾಂಚನವಾಗುವುದು. 10,000 ಮೀಟರ್ ಎತ್ತರದಲ್ಲಿ ಪಾಕಿಸ್ತಾನದ ಸೈನಿಕರು, ಕೆಳಗಡೆ ನಮ್ಮ ವೀರಯೋಧರು ಪ್ರಾಣದ ಹಂಗನ್ನು ತೊರೆದು ವಿಜಯವನ್ನು ಸಾಧಿಸಿದರು. ಈ ಹುತಾತ್ಮ ಹೋರಾಟಗಾರರು ಕೇವಲ ತಮ್ಮ ಪ್ರಾಣವನ್ನಷ್ಟೆ ಪಣಕ್ಕಿಡಲಿಲ್ಲ, ತಮ್ಮನ್ನು ನಂಬಿದ ಕುಟುಂಬ ವರ್ಗದ ಭವಿಷ್ಯವನ್ನೇ ದೇಶ ರಕ್ಷಣೆಗಾಗಿ ತ್ಯಾಗ ಮಾಡಿದರು. ಭಾರತ ಮಾತೆಯ ಸಾರ್ವಭೌಮತ್ವವನ್ನು ಅದರ ಭೌಗೋಳಿಕ ಸಮಗ್ರತೆಯನ್ನು ಕಾಪಾಡಲು ಹಾಗೂ ನಮ್ಮ ನಿಮ್ಮೆಲ್ಲರ ಸ್ವಾತಂತ್ರ್ಯದ ಬದುಕನ್ನು

ಚಿರಸ್ಥಾಯಿಯಾಗಿ ಉಳಿಸುವುದಕ್ಕೆ ಈ ತ್ಯಾಗಮಯಿ ಸೈನಿಕರನ್ನು ಅತ್ಯಂತ ವಿನೂತ ಭಾವನೆಯಿಂದ ನೆನೆಪಿಸಿಕೊಳ್ಳಬೇಕಾಗಿರುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಇವತ್ತು ಪ್ರಾಣವನ್ನು ಅರ್ಪಿಸಿದಂತಹ ಈ 533 ಯೋಧರಲ್ಲಿ 15 ಮಂದಿ ಸೇನಾಧಿಕಾರಿಗಳಲ್ಲಿ ಕರ್ನಾಟಕದ ವೀರ ಪುತ್ರರು ಸೇರಿದ್ದಾರೆ ಎಂಬುದು ನಾವೆಲ್ಲಾ ಹೆಮ್ಮೆ ಪಡುವ ವಿಚಾರ. ಇಂತಹ ವೀರಮರಣವನ್ನಪ್ಪಿದ ಕುಟುಂಬದ ಸದಸ್ಯರಿಗೆ ಗೌರವ ಸಮರ್ಪಿಸುವುದು ಸರ್ಕಾರದ ಮತ್ತು ನಾಡಿನ ಹಾಗೂ ದೇಶದ ಸಮಸ್ತ ಜನತೆಯ ಕರ್ತವ್ಯ.

ಕಾರ್ಗಿಲ್ ಕದನದಲ್ಲಿ ಮಡಿದ ಕರ್ನಾಟಕದ ವೀರ ಪುತ್ರರು ಹೀಗಿದ್ದಾರೆ:

1. ಶ್ರೀ ಧೋಂಡಿಬಾ ನಾರಾಯಣ ದೇಸಾಯಿ, ಬೆಳಗಾವಿ
2. ಶ್ರೀ ಮೋಹಿಲಿನ್ ಸುಬ್ರಹ್ಮಣ್ಯಂ, ಬೆಳಗಾವಿ
3. ಶ್ರೀ ಸಿದ್ಧನಗೌಡ ಪಾಟೀಲ್, ಬೆಳಗಾವಿ
4. ಶ್ರೀ ಯಶವಂತ ಕೋಲಕಾರ, ಮೇಕಲಮರಡಿ, ಬೆಳಗಾವಿ
5. ಶ್ರೀ ಭರತ್ ಬಬನ್ ಮಸ್ಕೆ, ಬೆಳಗಾವಿ
6. ಶ್ರೀ ಬಸಪ್ಪ ಚೌಗುಲಾ, ದರೂರ, ಬೆಳಗಾವಿ
7. ಶ್ರೀ ದಿಲೀಪ್ ಪೋತದಾರ, ಗದ್ಯಾಲ, ಬಾಗಲಕೋಟೆ
8. ಶ್ರೀ ಶಿವಬಸವಯ್ಯ ಬಸಯ್ಯ ಕುಲಕರ್ಣಿ, ಬಾಗಲಕೋಟೆ
9. ಶ್ರೀ ದಾವಲಸಾಬ ಅಲ್ಲೀಸಾಬ ಕಂಬಾರ, ವಿಜಾಪುರ
10. ಶ್ರೀ ಮಲ್ಲಯ್ಯ ಮೇಗಳಮಠ, ಅಳವಂಡಿ, ಕೊಪ್ಪಳ
11. ಶ್ರೀ ಪಿ.ಡಿ. ಕಾವೇರಪ್ಪ, ಮೈಥಾಡಿ, ಕೊಡಗು
12. ಶ್ರೀ ಎಸ್.ಕೆ. ಮೇದಪ್ಪ ಕರಂಗದೂರ, ಕೊಡಗು
13. ಶ್ರೀ ಹೆಚ್.ವಿ. ಯಂಕಟ್ಟು, ಅಗ್ರಹಾರ, ಹಾಸನ
14. ಶ್ರೀ ಅಶೋಕ್ ಭೀಮಪ್ಪ ಜಾದವ್, ಬಿಜಾಪುರ
15. ಲೆಫ್ಟಿನೆಂಟ್ ಕರ್ನಲ್ ಅಜೀತ್ ಭಂಡಾಕರ್ಕರ್, ನಂದಿನಿ ಬಡಾವಣೆ, ಬೆಂಗಳೂರು

ಹೀಗೆ 15 ಮಂದಿ ಈ ಕದನದಲ್ಲಿ ನಮ್ಮ ನಾಡಿನ ಕರ್ನಾಟಕದವರು ಪ್ರಾಣವನ್ನು ಅರ್ಪಿಸಿದ್ದಾರೆ. ಅದಲ್ಲದೆ ನೂರಾರು ಮಂದಿ ಯೋಧರು ಮಾರಣಾಂತಿಕವಾಗಿ ಗಾಯಗೊಂಡು ಚೇತರಿಸಿಕೊಳ್ಳುತ್ತಿದ್ದಾರೆ. ಅದರಲ್ಲಿ ಕರ್ನಾಟಕದವರೂ ಇದ್ದಾರೆ. ಆ ಪಟ್ಟಿಯನ್ನು ತರಿಸುತ್ತಿದ್ದೇನೆ. 15 ಮಂದಿ ವೀರ ಯೋಧರ ಕುಟುಂಬಗಳಿಗೆ ರಾಜ್ಯ ಸರ್ಕಾರದಿಂದ ಆಗಸ್ಟ್ 15ನೇ ತಾರೀಖು ಅವರನ್ನು ಬೆಂಗಳೂರಿಗೆ ಕರೆಸಿ ಅವರ ಕುಟುಂಬಗಳಿಗೆ ತಲಾ 5 ಲಕ್ಷ

ರೂಪಾಯಿಗಳ ಗೌರವಧನದ ರೂಪದಲ್ಲಿ ಸರ್ಕಾರದ ಪರವಾಗಿ ಕೊಡುವಂಥದ್ದು, ಅದರಲ್ಲಿ ಎಷ್ಟು ಪಾಲು ತಂದೆ ತಾಯಿಯರಿಗೆ ಕೊಡಬೇಕು. ಎಷ್ಟು ಪಾಲು ಮಡಿದ ಯೋಧನ ಮಡದಿ ಮತ್ತು ಮಕ್ಕಳಿಗೆ ಕೊಡುವುದು, ಎಂಬುದನ್ನು ಲೆಕ್ಕ ಮಾಡಿ ಅವರಿಗೆ ತಲುಪಿಸುವಂಥದ್ದು, ಈ ಕಾರ್ಗಿಲ್ ಕದನದಲ್ಲಿ ಯಾರ್ಯಾರು ಗಾಯಾಳುಗಳಾಗಿ ಅತ್ಯಂತ ಚಿತ್ರ ಹಿಂಸೆ ಜೀವನ ನಡೆಸುತ್ತ ಕಣ್ಣೀರಿಡುತ್ತಿದ್ದಾರೆ, ಆ ಗಾಯಾಳುಗಳಿಗೂ ಕೂಡ ಒಂದು ಲಕ್ಷ ರೂ.ಗಳನ್ನು ಅವರ ಯೋಗ ಕ್ಷೇಮಕ್ಕಾಗಿ ನೆರವನ್ನು ಕೊಡುವುದಕ್ಕೂ ಸಹ ಸ್ವಾತಂತ್ರ್ಯೋತ್ಸವದ ದಿವಸ ಬೆಂಗಳೂರಿಗೆ ಕರೆಸಿ ಚೆಕ್ ರೂಪದಲ್ಲಿ ಅವರಿಗೆ ಹಣವನ್ನು ಕೊಡಬೇಕು ಎನ್ನುವ ನಿರ್ಧಾರವನ್ನು ಮಾಡಿದ್ದೇವೆ. ಯಾರಾದರೂ ಅಸುನೀಗಿದ ವೀರಯೋಧರ ಹೆಸರುಗಳು ಬಿಟ್ಟು ಹೋಗಿದ್ದರೆ, ಅದನ್ನೂ ಸೇರಿಸಿ ಅವರಿಗೆ ಹಣವನ್ನು ತಲುಪಿಸುತ್ತೇವೆ. ಇನ್ನೊಂದು ಸಂತೋಷದ ಸಂಗತಿ ಎಂದರೆ, ಕಾರ್ಗಿಲ್ ವಿಜಯದ ನೆನಪಿನ ಸಂದರ್ಭದಲ್ಲಿ ನಿನ್ನೆ ನಮ್ಮ ಪ್ರಧಾನಿಯವರು Nuclear Sub marine Arihant ದೇಶಕ್ಕೆ ಸಮರ್ಪನೆ ಮಾಡಿದ್ದಾರೆ. ಇದಕ್ಕಾಗಿ ದುಡಿದಂತಹ ಅನೇಕ ವಿಜ್ಞಾನಿಗಳಿಗೆ ನಾನು ನಮನಗಳನ್ನು ಸಲ್ಲಿಸುತ್ತಿದ್ದೇನೆ. ದಿವಂಗತ ಪ್ರಧಾನಿಯವರಾದ ಲಾಲ್ ಬಹದ್ದೂರ್ ಶಾಸ್ತ್ರಿಯವರು 'ಜೈಜವಾನ್ ಜೈ ಕಿಸಾನ್' ಈ ಘೋಷಣೆಯನ್ನು ಮಾಡಿದ್ದರು. ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಪ್ರಧಾನಿಯಾಗಿದ್ದಾಗ 'ಜೈ ವಿಜ್ಞಾನ್' ಎನ್ನುವುದನ್ನು ಸೇರಿಸಿದ್ದರು. ಏಕೆಂದರೆ 21ನೇ ಶತಮಾನದಲ್ಲಿ ವಿಜ್ಞಾನಿಗಳು ದಾಪುಗಾಲು ಹಾಕಿ ದೇಶದ ಅಭಿವೃದ್ಧಿಗಾಗಿ ಮುಂದಿಡ್ಡುತ್ತಿರುವ ಈ ಸಂದರ್ಭದಲ್ಲಿ 'ಜೈ ವಿಜ್ಞಾನ್' ಎನ್ನುವುದನ್ನು ಸೇರಿಸಿದರು. ಅಧ್ಯಕ್ಷರೆ, ಇಷ್ಟು ಹೇಳುವುದಕ್ಕೆ ನಾನು ಇಚ್ಛೆ ಪಡುತ್ತೇನೆ. ಇವತ್ತಿನ ನಡವಳಿಕೆಯನ್ನು ನೋಡಿದಾಗ ಆ ಗಡಿಯಲ್ಲಿ ಹಗಲು ರಾತ್ರಿ ನಮ್ಮ ರಕ್ಷಣೆಗಾಗಿ ಪ್ರಾಣಾರ್ಪಣೆ ಮಾಡುತ್ತಿರುವಂತಹ ವೀರಯೋಧರನ್ನು ನೆನೆಪಿಸಿ ಕೊಂಡಾಗ ಯಾರಿಗಾಗಿ ಬಲಿದಾನ ಆಗಬೇಕು? ಯಾರಿಗಾಗಿ ಅವರು ಹೋರಾಟ ಮಾಡಬೇಕು? ಅವರಿಗೆ ಯಾವ ನಂಬಿಕೆ ವಿಶ್ವಾಸ ಇದೆ? ದೇಶ ಭಕ್ತಿ ಮಾಯ ಆಗುತ್ತಿರುವಂತಹ ಸಂದರ್ಭದಲ್ಲಿ ದೇಶದ ಏಕತೆ ಅಖಂಡತೆ ಹಾಗೂ ಸಮಗ್ರತೆ ಬಗ್ಗೆ ಚಿಂತನೆ ಮಾಡುವುದಕ್ಕೆ ಪುರುಸೊತ್ತು ಇಲ್ಲದೆ ಇರುವಂತಹ ವ್ಯವಸ್ಥೆ ಇರುವಂತಹ ಈ ಕಾಲದಲ್ಲಿ ಆ ವೀರ ಯೋಧರು ಇದು ಯಾವುದರ ಕಡೆಗೂ ಕಿವಿ ಕೊಡದೆ, ಗಮನ ಕೊಡದೆ, ಏನು ಹೋರಾಟ ಮಾಡುತ್ತಿದ್ದಾರೆ ಅವರಲ್ಲಿ ಆತ್ಮ ವಿಶ್ವಾಸವನ್ನು ಮೂಡಿಸುವಂತಹ ಒಂದು ಕೆಲಸ ಆಡಳಿತ

ನಡೆಸುವಂತಹವರಾದ ನಮ್ಮಿಂದ ಆಗಬೇಕಾಗಿದೆ. ಅದೇ ರೀತಿ ಯಾವ ಯಾವ ಪೀಳಿಗೆ ದೇಶದ ಮುಂದಿನ ರಕ್ಷಣೆಗಾಗಿ ಕೆಲಸ ಮಾಡಬೇಕೆಂದಿದ್ದಾರೆ ಅವರಿಗೆ ಪ್ರೇರಣೆ ಮೂಡಿಸುವಂತಹ ಆ ರೀತಿ ವಾತಾವರಣ ನಿರ್ಮಾಣ ಮಾಡುವಂತಹ ಪ್ರಾಮಾಣಿಕ ಪ್ರಯತ್ನ ನಮ್ಮಿಂದ ಆಗದೇ ಇದ್ದರೆ, 1947ರ ಸ್ವಾತಂತ್ರ್ಯ ಏತಕ್ಕಾಗಿ ಬಂದಿತು, ಏತಕ್ಕಾಗಿ ಈ ಬಲಿದಾನ ಆಗಬೇಕಾಗಿತ್ತು, ಈ ರೀತಿ ಯುವ ಪೀಳಿಗೆ ಶಾಪ ಹಾಕಿ ನೋಡುವಂತಹ ಒಂದು ಕಾಲ ಇದೆ. ಮುಂದಿನ ಪೀಳಿಗೆ ಅದರೂ ಇದನ್ನು ಸರಿಪಡಿಸಿಕೊಂಡು ಮುಂದೆ ಹೋಗಬೇಕೆಂದರೆ, ಆ ರೀತಿ ಮೇಲ್ಪಂಕ್ತಿಯನ್ನು ಹಾಕಬೇಕಾಗಿದೆ. ಈಗ ಮೇಲ್ಪಂಕ್ತಿ ಯಾರು? ಯಾರನ್ನು ನೋಡಿ ಕಲಿಯಬೇಕು? ಈ ಪ್ರಶ್ನೆ ನಮ್ಮನ್ನು ಕಾಡುತ್ತಿರುವಂತಹ ಈ ಕಾಲದಲ್ಲಿ ಈ ಕಾರ್ಗಿಲ್ ಯುದ್ಧ ನಡೆದ 10 ವರ್ಷಗಳ ನಂತರ ಅವರನ್ನು ನೆನಪು ಮಾಡಿಕೊಳ್ಳುವಂತಹ ಕೆಲಸ ನಡೆಯುತ್ತಿದೆ. ರಾಷ್ಟ್ರದ ಗಡಿಗಳನ್ನು ಸುಭದ್ರವಾಗಿಡಿಸಿ ನಾಗರೀಕರ ನೆಮ್ಮದಿ ಮತ್ತು ಸುರಕ್ಷತೆಯ ಬದುಕಿಗೆ ಹಗಲೂ ರಾತ್ರಿ ದುಡಿಯುತ್ತಿರುವಂತಹ ಯೋಧರಿಗೆ ಯುದ್ಧ ಕಾಲದಲ್ಲಿ ಪ್ರಾಣ ತ್ಯಾಗ ಮಾಡಿದವರು ಹಾಗೂ ಗಾಯಾಳುಗಳಿಗೆ ಅಂಗವೈಕಲ್ಯ ಮತ್ತು ಇತರ ತೊಂದರೆಗೊಳಗಾಗುವ ಯೋಧರ ಮತ್ತು ಅವರ ಕುಟುಂಬದವರ ಯೋಗಕ್ಷೇಮ ನೋಡಿಕೊಳ್ಳುವಂಥದ್ದು ಸರ್ಕಾರದ ಜೊತೆಗೆ ಸಮಾಜದ ಕರ್ತವ್ಯವಾಗಿದೆ. ಈ ಯೋಧರ ತ್ಯಾಗವನ್ನು ನೆನಪು ಮಾಡಿಕೊಂಡು ಗೌರವ ಪೂರ್ಣವಾಗಿ ಶ್ರದ್ಧಾಂಜಲಿ ಮತ್ತು ಅವರಿಗೆ ಸಹಾಯಧನ ಕೊಡುತ್ತಿರುವಂಥದ್ದು ಇದು ನಮ್ಮ ಕರ್ತವ್ಯ. ಇದು ಉಪಕಾರ ಅಲ್ಲ. ಅವರ ಸೇವೆಯನ್ನು ನೆನಪಿಟ್ಟುಕೊಂಡು ಕಾರ್ಗಿಲ್ ಯುದ್ಧದಲ್ಲಿ ಮಡಿದ ಯೋಧನ ಕುಟುಂಬ ನೆಮ್ಮದಿಯಿಂದ ಬದುಕಬೇಕು. ಆ ತಾಯಿ, ಉಳಿದ ಮಕ್ಕಳಲ್ಲಿ ಈ ರೀತಿ ಹೋರಾಟ ಮಾಡುವಂತಹ ಮನೋಪ್ರವೃತ್ತಿಯನ್ನು ಬೆಳೆಸುವುದಕ್ಕೆ ಆ ಯುವ ಪೀಳಿಗೆಯಲ್ಲಿ ಜಾಗೃತಿ ಮೂಡುವುದಕ್ಕೋಸ್ಕರ ಪ್ರಯತ್ನ ಮಾಡಬೇಕಾಗಿದೆ. ಇವತ್ತು ಮಾನ್ಯ ಅಧ್ಯಕ್ಷರು ಕಾರ್ಗಿಲ್ ಯೋಧರ ಬಗ್ಗೆ ಒಂದು ಶ್ರದ್ಧಾಂಜಲಿ ನಿರ್ಣಯವನ್ನು ತಂದಿದ್ದಾರೆ, ಮತ್ತೊಮ್ಮೆ ಅವರೆಲ್ಲರನ್ನು ಸ್ಮರಣೆ ಮಾಡಿಕೊಳ್ಳುತ್ತಾ ಕರ್ತವ್ಯದ ರೀತಿಯಲ್ಲಿ ಈ ಒಂದು ಘೋಷಣೆ ಮಾಡುತ್ತಿದ್ದೇನೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿದ್ಧರಾಮಯ್ಯ (ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಕಾರ್ಗಿಲ್ ವಿಜಯದಲ್ಲಿ ಮಡಿದಂತಹ ಹುತಾತ್ಮರಿಗೆ ಗೌರವ ಸಲ್ಲಿಸತಕ್ಕಂತಹ ಅವರನ್ನು ಸ್ಮರಿಸಿಕೊಳ್ಳತಕ್ಕಂತಹ, ಅವರ ದೇಶಪ್ರೇಮ ಮತ್ತು

ಅವರ ತ್ಯಾಗ ಬಲಿದಾನವನ್ನು ಸ್ಮರಿಸಿಕೊಳ್ಳತಕ್ಕಂತಹ ಒಂದು ನಿರ್ಣಯವನ್ನು ತಾವು ತಂದಿದ್ದೀರಿ. ನಾನು ಆ ನಿರ್ಣಯಕ್ಕೆ ಒಂದೆರಡು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ನಿನ್ನೆಗೆ ಕಾರ್ಗಿಲ್ ಯುದ್ಧದಲ್ಲಿ ನಾವು ಜಯಿಸಿ 10 ವರ್ಷಗಳು ತುಂಬಿವೆ.

1999ರ ಜುಲೈ 26ನೇ ತಾರೀಖಿನಂದು ನಮ್ಮ ಸೈನಿಕರಿಗೆ ಜಯ ಸಿಕ್ಕಿದ ದಿನವಾಗಿದೆ. ಈಗಾಗಲೇ ಪ್ರಸ್ತಾಪ ಮಾಡಿರುವಂತೆ ಈ ಕಾರ್ಗಿಲ್ ಯುದ್ಧದಲ್ಲಿ 533 ಯೋಧರು ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದಾರೆ, ಸುಮಾರು 1363 ಯೋಧರುಗಳು ಗಾಯಾಳುಗಳಾಗಿದ್ದಾರೆ. ಬಹುಶಃ ಇದೊಂದು ಭಾರತದ ಇತಿಹಾಸದಲ್ಲಿ ದಾಖಲಾಗಿರತಕ್ಕಂಥ ಮತ್ತು ನಾವೆಲ್ಲರೂ ಕೂಡ ಸದಾ ಜ್ಞಾಪಕದಲ್ಲಿಟ್ಟುಕೊಳ್ಳತಕ್ಕಂಥ ಮರೆಯಲಾರದ ದಿನವಾಗಿದೆ. ಹೀಗಾಗಿ ಪ್ರತಿ ವರ್ಷ ನಾವು ಈ ವಿಜಯದ ದಿವಸದ ಆಚರಣೆಯನ್ನು ಮಾಡಿಕೊಂಡು ಬರುತ್ತಿದ್ದೇವೆ. ಈ ವಿಜಯದ ದಿವಸದ ಆಚರಣೆಯನ್ನು ಮಾಡುವುದು ನಾವು ಗೆದ್ದೆವು ಎನ್ನತಕ್ಕಂಥ ಹೆಮ್ಮೆಗಿಂತ ಹೆಚ್ಚಾಗಿ ನಮ್ಮ ದೇಶ ರಕ್ಷಣೆಗೋಸ್ಕರ ಪ್ರಾಣವನ್ನು ಕಳೆದುಕೊಂಡಂಥ, ತ್ಯಾಗ ಬಲಿದಾನಗಳನ್ನು ಮಾಡಿದಂಥವರಲ್ಲಿದ್ದಂಥ ರಾಷ್ಟ್ರ ಪ್ರೇಮದ ಕೆಚ್ಚನ್ನು ನಾವು ನೆನಪು ಮಾಡಿಕೊಳ್ಳುತ್ತಾ ಇಂಥ ರಾಷ್ಟ್ರ ಪ್ರೇಮ ಇಡೀ ನಮ್ಮ ಭಾರತ ದೇಶದಲ್ಲಿರುವ ನೂರು ಕೋಟಿ ಜನರಲ್ಲಿ ಬರಬೇಕಾಗುತ್ತದೆ. ಇಂದಿನ ದಿನಗಳಲ್ಲಿ ರಾಷ್ಟ್ರ ಪ್ರೇಮ ಕಡಿಮೆಯಾಗಿರತಕ್ಕಂಥ ಚಿತ್ರವನ್ನು ನಾವು ಕಾಣುತ್ತಿದ್ದೇವೆ. ಪ್ರತಿಯೊಬ್ಬ ಭಾರತೀಯನಲ್ಲಿಯೂ ರಾಷ್ಟ್ರ ಪ್ರೇಮವಿದ್ದರೆ, ರಾಷ್ಟ್ರಕ್ಕೋಸ್ಕರ ತ್ಯಾಗ ಬಲಿದಾನಗಳನ್ನು ಮಾಡಬೇಕು ಎನ್ನುವ ಮನೋಭಾವನೆ ಇದ್ದರೆ ಬಹುಶಃ ನಮ್ಮ ದೇಶದಲ್ಲಿ ನಡೆಯುವಂಥ ಅನೇಕ ಅನಾಹುತಗಳನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಅದು terrorism activities ಇರಬಹುದು, ದೇಶದ ಆಂತರಿಕ ಭದ್ರತೆಗೆ ಅಪಾಯವಾಗತಕ್ಕಂಥ ಅನೇಕ ಘಟನೆಗಳು ದೇಶದಲ್ಲಿ ಏನು ನಡೆಯುತ್ತಿವೆ ಮತ್ತು ದೇಶದ ಒಳಗೆ ಮತ್ತು ಹೊರಗೆ ದೇಶದ ಭದ್ರತೆಗೆ ಏನು ಅಪಾಯಗಳಿವೆ, ಈ ರೀತಿಯ ಎಲ್ಲ ಅಪಾಯಗಳನ್ನು ಕೂಡ ನಾವು ನಿಜವಾಗಿಯೂ ರಾಷ್ಟ್ರ ಪ್ರೇಮಿಗಳಾಗಿದ್ದರೆ ಇಂಥವುಗಳನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಕೇವಲ ಯೋಧರಲ್ಲಿ ರಾಷ್ಟ್ರ ಪ್ರೇಮವಿದ್ದರೆ ಸಾಲದು. ಕೇವಲ ಸೈನಿಕರಲ್ಲಿ ರಾಷ್ಟ್ರ ಪ್ರೇಮವಿದ್ದರೆ ಸಾಲದು, ಪ್ರತಿಯೊಬ್ಬ ಭಾರತೀಯನಲ್ಲಿಯೂ ಕೂಡ ರಾಷ್ಟ್ರ ಪ್ರೇಮ ಬರಬೇಕಾಗುತ್ತದೆ. ನನ್ನ ತಾಯಿನಾಡು, ನನ್ನ ದೇಶ, ನಾನು ದೇಶಕ್ಕೋಸ್ಕರ ಏನಾದರೂ ತ್ಯಾಗ

ಮಾಡಬೇಕು ಎನ್ನತಕ್ಕಂಥ ತ್ಯಾಗ ಮನೋಭಾವ ಪ್ರತಿಯೊಬ್ಬ ಭಾರತೀಯನಲ್ಲಿ ಬಂದಾಗ ನಮ್ಮ ದೇಶ ಹೆಚ್ಚು ಸುಭದ್ರವಾಗಿರುವುದಕ್ಕೆ ಸಾಧ್ಯವಾಗುತ್ತದೆ. ಇಂಥ ಒಂದು ಚಿಂತನೆಗಳು, ಆದರ್ಶಗಳು ನಮ್ಮ ಯುವಕರಲ್ಲಿ ಬರುವುದಕ್ಕೆ ನಮ್ಮ ಎಲ್ಲ ಜನರಲ್ಲಿ ಬರುವುದಕ್ಕೆ ಇದು ಮಾರ್ಗದರ್ಶನವಾಗುತ್ತದೆ. ಈ ಯೋಧರ ತ್ಯಾಗ ಬಲಿದಾನಗಳು ಆದರ್ಶಗಳಾಗುತ್ತವೆ. ಇಂಥ ದಿನವನ್ನು ನಾವೆಲ್ಲರೂ ನೆನಪು ಮಾಡಿಕೊಳ್ಳುತ್ತಿದ್ದೇವೆ. ತಾವು ಕೂಡ ಇವತ್ತು ನಿರ್ಣಯವನ್ನು ತಂದಿದ್ದೀರಿ. ನಮ್ಮ ಯುವ ಪೀಳಿಗೆಯ ಎಲ್ಲ ಯುವಕ, ಯುವತಿಯರಿಗೆ ಇದು ತಿಳಿಯಬೇಕು. ನಾನು ಅನೇಕ ಸಾರಿ ಪತ್ರಿಕೆಗಳಲ್ಲಿ ಓದುತ್ತಿರುತ್ತೇನೆ, ನಮ್ಮ ದೇಶದ ಸೈನ್ಯಕ್ಕೆ ಯುವಕರು ಬರುತ್ತಿಲ್ಲ, ಸೈನ್ಯಕ್ಕೆ ಸೇರುತ್ತಿಲ್ಲವೆನ್ನತಕ್ಕಂಥ ಜಾಹಿರಾತುಗಳಲ್ಲಿ ಅನೇಕ ಪತ್ರಿಕೆಗಳಲ್ಲಿ ನೋಡುತ್ತಿರುತ್ತೇನೆ. ದೇಶದ ರಕ್ಷಣೆಯಲ್ಲಿ ನಾನೂ ಕೂಡ ಪಾಲುದಾರನಾಗಬೇಕೆಂಬ ಭಾವನೆ ಇಂದಿನ ಯುವಕರಲ್ಲಿ, ಯುವತಿಯರಲ್ಲಿ ಬಂದರೆ, ಬಹುಶಃ ಆ ತರಹದ ಯೋಧರನ್ನು ಸೇರಿಸಿಕೊಳ್ಳತಕ್ಕಂಥದ್ದರಲ್ಲಿ ತೊಂದರೆಯಾಗಿದೆ ಎನ್ನತಕ್ಕಂಥ ಪರಿಸ್ಥಿತಿ ನಿರ್ಮಾಣವಾಗುವುದಿಲ್ಲ. ಹೀಗಾಗಿ ಇವತ್ತು ಈ ಕಾರ್ಗಿಲ್ ಯುದ್ಧದಲ್ಲಿ ಯೋಧರು ಏನು ಮಡಿದಿದ್ದಾರೆ ಅವರ ಬದುಕು ಯಾವ ರೀತಿ ಇತ್ತು ಎಂಬ ಬಗ್ಗೆ ಯುವ ಜನತೆಗೆ ತಿಳಿಸತಕ್ಕಂಥ ಕೆಲಸವಾಗಬೇಕು. ಇಂದಿನ ಯುವಕ/ಯುವತಿಯರಿಗೆ ಗೊತ್ತಾಗಬೇಕು. ಸ್ವಾತಂತ್ರ್ಯಕ್ಕೋಸ್ಕರ ಹೋರಾಟ ಮಾಡಿದಂಥ ನಾಯಕರುಗಳು, ಸ್ವಾತಂತ್ರ್ಯಕ್ಕೋಸ್ಕರ ತಮ್ಮ ಪ್ರಾಣವನ್ನೇ ತೆತ್ತಂಥ ನಾಯಕರುಗಳು, ಸ್ವಾತಂತ್ರ್ಯ ಪ್ರೇಮಿಗಳು, ದೇಶಭಕ್ತರುಗಳ ಬದುಕು ನಮ್ಮ ಶಿಕ್ಷಣದ ಒಂದು ಭಾಗವಾಗಬೇಕು. ಆ ಮೂಲಕ ಯುವಕರಲ್ಲಿ ದೇಶ ಪ್ರೇಮದ ಪ್ರೇರೇಪಣೆಯಾಗತಕ್ಕಂಥ ಕೆಲಸ ಕೂಡ ಆಗಬೇಕಾಗಿದೆ. ಆದುದರಿಂದ ಇವತ್ತು ಏನು ನಿರ್ಣಯವನ್ನು ತಂದಿದ್ದೀರಿ ಇದು ಬಹುಶಃ ದೇಶ ಪ್ರೇಮಕ್ಕಾಗಿ ಜನರಲ್ಲಿ ಪ್ರಚೋದನೆ ನೀಡುತ್ತದೆಂದು ನಾನಾದರೂ ಭಾವಿಸಿಕೊಂಡಿದ್ದೇನೆ. ಇವತ್ತಿಗೂ ಕೂಡ ನಮ್ಮ ಗಡಿ ಭಾಗದಲ್ಲಿ ಪಾಕಿಸ್ತಾನವಿರಬಹುದು, ಚೀನಾವಿರಬಹುದು, ಆ ಭಾಗದ ಎಲ್ಲ ಪ್ರದೇಶಗಳಲ್ಲಿ ನಾವು ಇಂದು ಆತಂಕದ ಪರಿಸ್ಥಿತಿಯಲ್ಲಿದ್ದೇವೆ. ದಿನನಿತ್ಯ ಯಾವಾಗ ಏನು ಆಗುತ್ತದೋ ಎಂಬುದನ್ನು ಹೇಳುವುದಕ್ಕೆ ಆಗುತ್ತಿಲ್ಲದ ಪರಿಸ್ಥಿತಿಯಲ್ಲಿದ್ದೇವೆ. ಮಾನ್ಯ ವಾಜಪೇಯಿಯವರು ಆ ಕಾಲದಲ್ಲಿ ಪ್ರಧಾನ ಮಂತ್ರಿಗಳಾಗಿ ಅವರು ಲಾಹೋರ್‌ಗೆ ಹೋಗಿ ಸಹಿ ಹಾಕಿದರು. ಅಲ್ಲಿ ಸೈನ್ ಹಾಕುತ್ತಿದ್ದಾರೆ, ಇತ್ತ ಇಲ್ಲಿ ನಮ್ಮ ದೇಶದೊಳಗೆ ವಿರೋಧಿ ಸೈನಿಕರು ನಮ್ಮ ದೇಶದೊಳಗೆ ನುಗ್ಗುತ್ತಿದ್ದಾರೆ. ಒಬ್ಬ ದನ ಕಾಯುವವನು ಮಿಲಿಟರಿಯವರಿಗೆ

ಈ ಬಗ್ಗೆ ಹೇಳುತ್ತಾನೆ. ನಮ್ಮ ಭಾರತದೊಳಗೆ ಪಾಕ್ ಸೈನಿಕರು ನುಗ್ಗುತ್ತಿದ್ದಾರೆ, ನಮ್ಮ ಮೇಲೆ ಗುಂಡು ಹಾರಿಸುತ್ತಿದ್ದಾರೆ ಎನ್ನತಕ್ಕಂಥ ವಿಷಯವನ್ನು ದನ ಕಾಯುವವನು ಮಿಲಿಟರಿಯವರಿಗೆ ತಿಳಿಸುತ್ತಾನೆ. ಆಗ ಯುದ್ಧ ಪ್ರಾರಂಭವಾಗಿ ಸುಮಾರು 70 ದಿವಸಕ್ಕೂ ಹೆಚ್ಚು ಕಾಲ ಯುದ್ಧ ನಡೆಯುತ್ತದೆ, ಇದರ ಜೊತೆಗೆ ನಮಗೆ ಅಂದು ಜಯ ಸಿಗುತ್ತದೆ. ಬಹುಶಃ ಅವತ್ತು ಪರ್ವೇಜ್ ಮುಷರಫ್ ಸೈನ್ಯದ ದಂಡನಾಯಕರಾಗಿದ್ದರು, ಇವರಿಗೆ ಆಫ್ಘಾನಿಸ್ಥಾನದಲ್ಲಿ ಜಯ ಸಿಕ್ಕಿ ಬಿಟ್ಟಿರುತ್ತದೆ, ಅದರ ಹುಮ್ಮಸ್ಸಿನಲ್ಲಿ ನಮ್ಮ ಮೇಲೆ ನುಗ್ಗುವುದಕ್ಕೆ ಬರುತ್ತಾರೆ. 1999ರ ಮೇ, ಜೂನ್, ಜುಲೈನಲ್ಲಿ ನಡೆದಂಥ ಕಾರ್ಗಿಲ್ ಯುದ್ಧದಲ್ಲೊಂದರಲ್ಲಿಯೇ ನಮಗೆ ಜಯ ಸಿಕ್ಕಿದ್ದಲ್ಲ. ಅದಕ್ಕೂ ಹಿಂದೆಯೇ ಅನೇಕ ಬಾರಿ ಈ ರೀತಿಯ ಜಯಗಳು ಸಿಕ್ಕಿವೆ. ಅನೇಕ ಸಾರಿ ಅವರಿಗೆ ಪಾಠವನ್ನು ಕಲಿಸಿದ್ದೇವೆ. ಆದರೂ ಕೂಡ ಇಂಥ ಕಿಡಿಗೇಡಿತನಗಳನ್ನು ಮಾಡತಕ್ಕಂಥದ್ದು, ಕಾಲು ಕೆರೆದುಕೊಂಡು ಜಗಳಕ್ಕೆ ಬರತಕ್ಕಂಥದ್ದು, ಕಾಲು ಕೆರೆದುಕೊಂಡು ಯುದ್ಧಕ್ಕೆ ಬರತಕ್ಕಂಥ ಕೆಲಸವನ್ನು ಪಾಕಿಸ್ತಾನದವರು ಮಾಡುತ್ತಲೇ ಇದ್ದಾರೆ. ಅದಕ್ಕೋಸ್ಕರ ನಾವು ಕಾರ್ಗಿಲ್ ಯುದ್ಧ ಗೆದ್ದ ದಿನವನ್ನು ಆಚರಣೆ ಮಾಡಿ ಇಡೀ ದೇಶದಲ್ಲಿ ಇವತ್ತಿನ ದಿನ ಅಂದಿನ ಯುದ್ಧದಲ್ಲಿ ಮಡಿದಂಥವರನ್ನು ಸ್ಮರಿಸಿಕೊಳ್ಳುತ್ತಾ, ಅವರನ್ನು ನೆನಸಿಕೊಳ್ಳುತ್ತಿದ್ದೇವೆ. ಈ ಯುದ್ಧದಲ್ಲಿ ಕರ್ನಾಟಕದ 15ಕ್ಕೂ ಹೆಚ್ಚು ಕನ್ನಡಿಗ ಯೋಧರು ತಮ್ಮ ಪ್ರಾಣ ತ್ಯಾಗವನ್ನು ಮಾಡಿದ್ದಾರೆ. ಇದರಲ್ಲಿ ಬೆಳಗಾಂನವರು, ಕೊಪ್ಪಳದವರು, ಬಿಜಾಪುರದವರು, ಮಡಿಕೇರಿಯವರು ಇದ್ದಾರೆ. ಅವರಿಗೋಸ್ಕರ ಮುಂದಿನ ಸ್ವಾತಂತ್ರ್ಯ ದಿನಾಚರಣೆಯಂದು ನಮ್ಮ ಮುಖ್ಯ ಮಂತ್ರಿಗಳು ಸರ್ಕಾರದಿಂದ 5 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ ಮತ್ತು ಗಾಯಾಳುಗಳಿಗೆ ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಅದನ್ನು ಸ್ವಾಗತ ಮಾಡೋಣ. ಅದರ ಜೊತೆಗೆ ಅವರ ಮಕ್ಕಳುಗಳಿಗೆ ಪುಕ್ಕಟೆ ಶಿಕ್ಷಣ ಮತ್ತು ಉದ್ಯೋಗ ಕೊಡತಕ್ಕಂಥ ಕೆಲಸವನ್ನು ಕೂಡ ಮಾಡಬೇಕು. ಅವರ ಕಡೆಯವರು ಯಾರಾದರೂ ಉದ್ಯೋಗಕ್ಕಾಗಿ ಬಂದಿದ್ದರೆ ಅವರಿಗೆ ಸರ್ಕಾರದ ವತಿಯಿಂದ ಉದ್ಯೋಗವನ್ನು ಕೊಡತಕ್ಕಂಥ ಕೆಲಸವನ್ನು ಮಾಡಬೇಕು. ಏಕೆಂದರೆ ಸಾಮಾನ್ಯವಾಗಿ ಸೈನ್ಯಕ್ಕೆ ಶ್ರೀಮಂತರು ಸೇರುವುದು ಬಹಳ ಕಡಿಮೆ. ಸೈನ್ಯಕ್ಕೆ ಸೇರುವವರು ಸಾಮಾನ್ಯವಾಗಿ ಸಾಮಾನ್ಯ ಕುಟುಂಬದಿಂದ ಬಂದಂಥವರಿರುತ್ತಾರೆ, ಕಷ್ಟದ ಬದುಕಿನಲ್ಲಿದಂಥವರು, ಬಡತನದಲ್ಲಿದ್ದಂಥವರು, ಕೆಳ ಮಧ್ಯಮ ವರ್ಗದ

ಜನರು ಸೈನ್ಯಗಳಿಗೆ ಸೇರತಕ್ಕಂಥವರಾಗಿರುತ್ತಾರೆ. ಅವರಲ್ಲಿ ದೇಶ ಪ್ರೇಮ ಅಡಿಗಿದೆ ನಿಜ. ಇದರ ಜೊತೆಗೆ ಉದ್ಯೋಗವನ್ನೂ ಕೂಡ ಬಯಸಿ ಹೋಗತಕ್ಕಂಥವರಿರುತ್ತಾರೆ. ಅವರ ಬದುಕನ್ನು ಕೂಡ ಭದ್ರಪಡಿಸುವಂತಹ ಕೆಲಸ ಮಾಡುವುದು ಅತ್ಯಂತ ಅವಶ್ಯಕತೆ ಇದೆ. ಸರ್ಕಾರದ ಕರ್ತವ್ಯ ಮತ್ತು ಸದನದಲ್ಲಿರುವ ನಮ್ಮೆಲ್ಲರ ಕರ್ತವ್ಯವಾಗಿರುತ್ತದೆ. ಆ ಕರ್ತವ್ಯವನ್ನು ಮಾಡಬೇಕೆಂದು ಹೇಳಿ, ಈ ಎಲ್ಲಾ ಹುತಾತ್ಮರಿಗೆ ನಾನು ಗೌರವವನ್ನು ಸಲ್ಲಿಸಿ, ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ, ಅವರ ಕುಟುಂಬ ವರ್ಗದವರಿಗೆ ಈ ಸದನದ ಮೂಲಕ ಸಾಂತ್ವನ ತಿಳಿಸುತ್ತೇನೆ. ಇದೇ ಸಂದರ್ಭದಲ್ಲಿ ಈ ಮನೆಯ ಸದಸ್ಯರಾಗಿದಂತಹ ಪ್ರಭಾಕರ್ ರಾವ್ ತೇಲ್ಕರ್‌ರವರು ಚಿತ್ತಾಪುರ ಕ್ಷೇತ್ರದಿಂದ ಆಯ್ಕೆಯಾಗಿ ಎರಡು ಬಾರಿ ಶಾಸಕರಾಗಿದ್ದರು. ಅವರೂ ಕೂಡ ನಮ್ಮನ್ನು ಆಗಲಿದ್ದಾರೆ. ಅವರು ವಕೀಲರಾಗಿದ್ದರು ಮತ್ತು ಅದೇ ಕ್ಷೇತ್ರದಲ್ಲಿ ಕೂಡ ಕೆಲಸವನ್ನು ಮಾಡಿದ್ದಾರೆ. ಹಿಂದುಳಿದ ಆಯೋಗದಲ್ಲಿ ಸದಸ್ಯರಾಗಿ ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ಮಾಡುವಂತಹ ಕೆಲಸವನ್ನು ಕೂಡ ಮಾಡಿದ್ದರು. ಅವರ ಆತ್ಮಕ್ಕೂ ಕೂಡ ಶಾಂತಿ ದೊರಕಲಿ ಎಂದು ಈ ಸಂದರ್ಭದಲ್ಲಿ ಹೇಳುತ್ತಾ, ಯುದ್ಧದಲ್ಲಿ ಮಡಿದಂತಹ ಹುತಾತ್ಮರಿಗೆ ಮತ್ತೊಮ್ಮೆ ಗೌರವ ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಕಾರ್ಗಿಲ್ ಯುದ್ಧದಲ್ಲಿ ಮಡಿದವರಿಗೆ ಶ್ರದ್ಧಾಂಜಲಿ ಅರ್ಪಿಸುವಂತಹ ಸಂದರ್ಭದಲ್ಲಿ ಮಾನ್ಯ ಪರಭಾಕರ್ ರಾವ್ ತೇಲ್ಕರ್‌ರವರು ಈ ಮನೆಯ ಸದಸ್ಯರಾಗಿ ದಿನಾಂಕ 25-7-2009ರಂದು ನಿಧನ ಹೊಂದಿದ್ದಾರೆ. ಅವರು ಚಿತ್ತಾಪುರ ಕ್ಷೇತ್ರದಿಂದ ಆಯ್ಕೆಯಾಗಿ ಜಿಲ್ಲಾ ಬಾರ್ ಅಸೋಸಿಯೇಷನ್ ಕಾರ್ಯದರ್ಶಿಯಾಗಿ, ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ 75ನೇ ಜನ್ಮ ದಿನೋತ್ಸವ ಆಚರಣಾ ಸಮಿತಿಯ ಅಧ್ಯಕ್ಷರಾಗಿ, ಬೇರೆ ಬೇರೆ ಕ್ಷೇತ್ರದಲ್ಲಿ ಕೆಲಸ ಮಾಡಿದಂತಹವರನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಅವರ ಆತ್ಮಕ್ಕೆ ಶಾಂತಿ ದೊರೆಯಲಿ ಎಂದು ಪ್ರಾರ್ಥನೆ ಮಾಡುತ್ತೇನೆ. ಈಗಾಗಲೇ ಕಾರ್ಗಿಲ್ ಯುದ್ಧದಲ್ಲಿ ವೀರ ಮರಣವನ್ನರ್ಪಿಸಿದವರಿಗೆ ಐದು ಲಕ್ಷ ರೂಪಾಯಿ ಪರಿಹಾರವನ್ನು ಸರ್ಕಾರ ಘೋಷಣೆ ಮಾಡಿದೆ. ಆಗಸ್ಟ್ 15ರಂದು ಅವರನ್ನು ಕರೆಸಿ ಅವರಿಗೆ ಚೆಕ್‌ಗಳನ್ನು ವಿತರಣೆ ಮಾಡುತ್ತೇನೆಂದು ಹೇಳಿದ್ದೇನೆ. ಅದರ ಜೊತೆಗೆ ಮಾನ್ಯ ಪ್ರತಿಪಕ್ಷದ ನಾಯಕರು ಸಲಹೆ ಕೊಟ್ಟ ಹಾಗೆ ಆ ಯೋಧರ ಮಕ್ಕಳಿಗೆ 18 ವರ್ಷ ದಾಟಿ ಅವರು ಉದ್ಯೋಗ ಪಡೆಯುವುದಕ್ಕೆ

ಅರ್ಹರಾಗಿದ್ದರೆ, ಅವರಿಗೆ ಉದ್ಯೋಗ ಕೊಡುವುದು ಅಥವಾ ಚಿಕ್ಕಮಕ್ಕಳಾಗಿದ್ದರೆ ಸರ್ಕಾರದ ವೆಚ್ಚದಲ್ಲಿ ಐದು ಲಕ್ಷ ರೂಪಾಯಿಯ ಜೊತೆಗೆ ಅವರ ಶಿಕ್ಷಣವನ್ನು ಉಚಿತವಾಗಿ ಅವರು ಎಲ್ಲಿಯವರೆಗೆ ಓದುತ್ತಾರೆ ಅಲ್ಲಿಯವರೆಗೆ ಓದಿಸುವಂತಹ ಜವಾಬ್ದಾರಿಯನ್ನು ಸರ್ಕಾರ ಇವತ್ತಿನಿಂದ ವಹಿಸಿಕೊಳ್ಳುತ್ತೇವೆ. ಅವರು ಕುಟುಂಬದವರ ಜೊತೆ ಮಾತನಾಡುತ್ತೇವೆ, ಅವರ ಭವಿಷ್ಯ ಬಗ್ಗೆ ನೋಡಬೇಕಾಗಿರುವುದು ನಮ್ಮ ಕರ್ತವ್ಯ, ಆ ಕರ್ತವ್ಯವನ್ನು ನಾವು ಮಾಡುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ): ಮಾನ್ಯ ಅಧ್ಯಕ್ಷರೆ, ಕಾರ್ಗಿಲ್ ಕಲಿಗಳಿಗೆ ಇವತ್ತು ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದ್ದೇವೆ. 1999 ಮೇ ತಿಂಗಳಿನಿಂದ ಜುಲೈ ತಿಂಗಳವರೆಗೆ ಸತತವಾಗಿ ಭಾರತ ಮತ್ತು ಪಾಕಿಸ್ತಾನದ ನಡುವೆ 74 ದಿನಗಳು ನಿರಂತರವಾಗಿ ನಡೆದ ಕಾರ್ಗಿಲ್ ಯುದ್ಧದಲ್ಲಿ ಸುಮಾರು 533 ಮಂದಿ ಯೋಧರು ಮತ್ತು 15 ಜನ ಸೇನಾಧಿಕಾರಿಗಳು ಮರಣ ಹೊಂದಿದ್ದು, ಅದರಲ್ಲಿ ಸುಮಾರು 15 ಮಂದಿ ಕರ್ನಾಟಕದ ಯೋಧರು ಮರಣ ಹೊಂದಿದ್ದಾರೆ. ಮರಣ ಹೊಂದಿದಂತಹ ಕುಟುಂಬದವರಿಗೆ ಇವತ್ತು ರಾಜ್ಯ ಸರ್ಕಾರ ಐದು ಲಕ್ಷ ರೂಪಾಯಿ ಕೊಡಬೇಕೆನ್ನುವ ಒಂದು ನಿರ್ಣಯ ಮಾಡಿದೆ. ಅದರ ಜೊತೆಗೆ ಅವರ ಕುಟುಂಬದ ಸದಸ್ಯರಿಗೆ ಉದ್ಯೋಗವನ್ನು ಕೊಡಬೇಕೆನ್ನುವ ವಿಚಾರವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು ಅದನ್ನು ನಾನೂ ಕೂಡ ಸ್ವಾಗತ ಮಾಡುತ್ತೇನೆ. ಯೋಧರ ಕುಟುಂಬದವರಿಗೆ ಐದು ಲಕ್ಷ ರೂಪಾಯಿಯ ಜೊತೆಗೆ ಅವರ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡುವಂತಹ ಕೆಲಸವನ್ನು ಮಾಡುತ್ತೇವೆನ್ನುವ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ, ಸಂತೋಷ. ಅದರ ಜೊತೆಗೆ ಯುದ್ಧ ಮಾಡುವಾಗ ಸಾವಿರಾರು ಯೋಧರು ಅಂಗವಿಕಲರಾಗಿರಬಹುದು, ಅದರಲ್ಲಿ ನಮ್ಮ ಕರ್ನಾಟಕದಲ್ಲಿ ಎಷ್ಟು ಮಂದಿ ಇದ್ದಾರೆ ಎನ್ನುವ ಮಾಹಿತಿಯನ್ನು ತರಿಸಿ, ಅವರ ಮಕ್ಕಳಿಗೂ ಸಹ ಇವತ್ತು ಉದ್ಯೋಗವನ್ನು ಕೊಡಬೇಕೆಂದು ನಾನು ಮನವಿ ಮಾಡುತ್ತೇನೆ. ಯಾರು ಅಂಗವಿಕಲರಾಗಿದ್ದರೆ ಅವರಿಗೆ ಒಂದು ಲಕ್ಷ ರೂಪಾಯಿಯ ಬದಲು ಐದು ಲಕ್ಷ ರೂಪಾಯಿ ಕೊಡುವುದು ಸೂಕ್ತವೆಂದು ನನ್ನ ಭಾವನೆ. ಏಕೆಂದರೆ ಇವತ್ತು ಅಂಗವಿಕಲ ಯೋಧರು ಅವರ ಮಕ್ಕಳನ್ನು ಸಾಕಬೇಕೆಂದರೆ ಬಹಳ ಕಷ್ಟ. ಆ ಪರಿಸ್ಥಿತಿ ಇರುವುದರಿಂದ ಅವರಿಗೂ ಕೂಡ ಕನಿಷ್ಟ 4–5 ಲಕ್ಷ ರೂಪಾಯಿ ಕೊಡಬೇಕೆಂದು ನಾನು ಮಾನ್ಯ ಮುಖ್ಯ ಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ. ಯಾರು ಅಂಗವಿಕಲರು ಇದ್ದಾರೆ ಅವರ ಮಕ್ಕಳಿಗೆ ವಿದ್ಯಾಭ್ಯಾಸ ಮತ್ತು

ಸರ್ಕಾರದ ನೌಕರಿಯನ್ನು ಕೊಡಿಸುವಂತಹ ಕೆಲಸವನ್ನು ಸರ್ಕಾರ ಮಾಡಲಿ ಎಂದು ಹೇಳುತ್ತೇನೆ. ಇದರ ಜೊತೆಗೆ ವಿಧಾನಸಭೆಯ ಮಾಜಿ ಸದಸ್ಯರಾದ ಶ್ರೀ ಪ್ರಭಾಕರ ರಾವ್ ತೇಲ್ಕರ್ ಅವರು 1931 ಅಕ್ಟೋಬರ್ 14ರಂದು ಜನಿಸಿದ್ದು, ಅವರು ವೃತ್ತಿಯಲ್ಲಿ ವಕೀಲರಾಗಿದ್ದು, ಜಿಲ್ಲಾ ಬಾರ್ ಅಸೋಸಿಯೇಷನ್ ಕಾರ್ಯದರ್ಶಿಯಾಗಿ, ಶಾಲಾ ಅಭಿವೃದ್ಧಿ ಮಂಡಳಿಯ ಉಪಾಧ್ಯಕ್ಷರಾಗಿ, ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ 75ನೇ ಜನ್ಮ ದಿನೋತ್ಸವದ ಆಚರಣಾ ಸಮಿತಿಯ ಅಧ್ಯಕ್ಷರಾಗಿ, ಕರ್ನಾಟಕ ರಾಜ್ಯ ಉಡುಪು ತಯಾರಿಕಾ ಉದ್ಯಮದ ಉದ್ಯೋಗಿಗಳಿಗೆ ಕನಿಷ್ಠ ವೇತನ ನಿಗದಿಪಡಿಸುವ ಸಮಿತಿಯ ಅಧ್ಯಕ್ಷರಾಗಿ ಹಾಗೂ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು. ಅವರ 25ರಂದು ನಿಧನ ಹೊಂದಿದ್ದು, ಅವರ ಕುಟುಂಬದವರಿಗೆ ಅವರ ಅಗಲಿಕೆಯಿಂದ ಆಗಿರುವಂತಹ ದುಃಖವನ್ನು ಭರಿಸುವಂತಹ ಶಕ್ತಿಯನ್ನು ಭಗವಂತ ನೀಡಬೇಕೆಂದು ಹೇಳುತ್ತಾ, ಕಾರ್ಗಿಲ್ ಯುದ್ಧದಲ್ಲಿ ಭಾರತ ಜಯಿಸಿ 10 ವರ್ಷಗಳಾಗಿವೆ. ಅವರ ಕುಟುಂಬದವರಿಗೂ ಸಹ ಸರ್ಕಾರ ಹೆಚ್ಚಿನ ರೀತಿಯಲ್ಲಿ ಸಹಕಾರ ನೀಡಲಿ ಎಂದು ಹೇಳಿ ಅವಕಾಶ ನೀಡಿದ ತಮಗೆ ವಂದನೆಗಳನ್ನು ತಿಳಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಚಂದ್ರಕಾಂತ್ ಬೆಲ್ಲದ್ (ಹುಬ್ಬಳ್ಳಿ-ಧಾರವಾಡ ಪಶ್ಚಿಮ): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳಾದಂತಹ ಶ್ರೀ ಬಿ.ಎಸ್. ಯಡಿಯೂರಪ್ಪ ನವರು ಕಾರ್ಗಿಲ್ ಯುದ್ಧದಲ್ಲಿ ಬಲಿದಾನ ಮಾಡಿದ ವೀರ ಯೋಧರ ಕುಟುಂಬದವರಿಗೆ ನೆರವು ಕುರಿತಂತೆ ಇವತ್ತಿನ ದಿವಸ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದು ಬಹಳ ಸ್ಮರಣೀಯವಾದುದು ಮತ್ತು ಸೂಕ್ತವಾದಂತಹ ಕಾರ್ಯವಾಗಿದೆ. ಬಹಳ ಮುಖ್ಯವಾಗಿ ರಾಷ್ಟ್ರದ ರಕ್ಷಣೆಯಲ್ಲಿ ನಮ್ಮ ದೇಶದ ಸೈನಿಕರ ಪಾತ್ರ ಎಷ್ಟು ಮಹತ್ವದಾಗಿದೆ ಎನ್ನುವುದನ್ನು ನಾವು ಗಮನಿಸಬೇಕಾಗಿದೆ. ಇವತ್ತು ರಾಷ್ಟ್ರವನ್ನು ರಕ್ಷಣೆ ಮಾಡುವುದಕ್ಕೆ ಸಾವಿರಾರು ವೀರ ಯೋಧರು ಪಾಕಿಸ್ತಾನದ ಯುದ್ಧದಲ್ಲಿ ಭಾಗವಹಿಸಿ ನಮ್ಮ ದೇಶಕ್ಕೆ ಜಯವನ್ನು ತಂದು ಕೊಟ್ಟಿದ್ದಾರೆ. ಅದರಲ್ಲಿ 533 ಮಂದಿ ವೀರ ಮರಣವನ್ನು ಪಡೆದಿದ್ದಾರೆ. ಅದರಲ್ಲಿ ಎಷ್ಟೋ ಜನ ಅಂಗವೈಕಲ್ಯವನ್ನು ಹೊಂದಿದ್ದಾರೆ. ಅವರು ಈ ದೇಶಕ್ಕೆ ನೀಡಿದ ಬಲಿದಾನ ಮತ್ತು ತ್ಯಾಗವನ್ನು ಎಷ್ಟು ಸ್ಮರಿಸಿದರೂ ಕೂಡ ಕಡಿಮೆಯೇ. ಅವರು ಇವತ್ತು ಅವರ ತಂದೆ ತಾಯಿ, ಮಕ್ಕಳನ್ನು ಬಿಟ್ಟು ದೇಶದ ರಕ್ಷಣೆಗೆ ತೊಡಗಿದ್ದಾರೆ. ದೇಶದ ರಕ್ಷಣೆಗಾಗಿ ಅವರು ಭಯಂಕರವಾದ ಚಳಿ ಮಳೆಯಲ್ಲಿ ನಿಂತು ನಮ್ಮ ದೇಶವನ್ನು ಸಂರಕ್ಷಣೆ ಮಾಡಿದ್ದಾರೆ. ಅವರು ನಮ್ಮ ದೇಶಕ್ಕೆ

ಜಯವನ್ನು ತಂದು ಕೊಟ್ಟಿದ್ದಾರೆ. ಅವರನ್ನು ಸ್ಮರಿಸಿಕೊಳ್ಳುವುದು ಬಹಳ ಸೂಕ್ತವಾದುದು. ಮಾನ್ಯ ಮುಖ್ಯಮಂತ್ರಿಯವರು ಮರಣ ಹೊಂದಿದ ಯೋಧರ ಕುಟುಂಬಕ್ಕೆ ಸಹಾಯ ಮತ್ತು ಅವರ ಮಕ್ಕಳಿಗೆ ವಿದ್ಯಾಭ್ಯಾಸ ನೀಡುವಂತಹ ಯೋಜನೆಯನ್ನು ಘೋಷಣೆ ಮಾಡಿದ್ದಾರೆ, ಇದು ಮೆಚ್ಚಿಕೊಳ್ಳುವಂತಹ ವಿಚಾರ. ಸೈನಿಕರಿಗೆ ಮೊಟ್ಟಮೊದಲ ಬಾರಿಗೆ ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಗೌರವ ತರುವಂತಹ ಕೆಲಸವನ್ನು ಮಾಡಿದರು. ಯುದ್ಧ ಮಾಡುತ್ತಿರುವಂತಹ ಗಡಿ ಭಾಗದವರೆಗೂ ಕೂಡ ಜಾರ್ಜ್ ಫರ್ನಾಂಡೀಸ್‌ರವರು ಹೋಗಿ ಬಂದರು. ಯೋಧರು ನಮ್ಮ ದೇಶದ ರಕ್ಷಣೆ ಮಾಡುವುದರ ಜೊತೆಗೆ ದೇಶದ ಗೌರವವನ್ನು ಹೆಚ್ಚಿಸುವಂತಹ ಕಾರ್ಯವನ್ನು ಮಾಡುತ್ತಿದ್ದಾರೆ. ಅವರ ತಂದೆ-ತಾಯಿ ಮತ್ತು ಅವರ ಕುಟುಂಬವನ್ನು ಬಿಟ್ಟು ದುರ್ಗತಿಕ ವಾತಾವರಣ ಸ್ಥಿತಿಯಲ್ಲಿ ನಮ್ಮೆಲ್ಲರನ್ನು ರಕ್ಷಣೆ ಮಾಡುತ್ತಿದ್ದಾರೆ. ಅವರ ಸೇವೆಯನ್ನು ಸ್ಮರಿಸಿಕೊಂಡರೆ ಅವರಿಗೆ ನಾವು ಏನು ಮಾಡಿದರೂ ಕೂಡ ಕಡಿಮೆ. ಅವರು ನಮ್ಮ ದೇಶದ ರಕ್ಷಣೆ ಮಾಡುತ್ತಿರುವುದರಿಂದ ಸುಖವಾಗಿ ನಾವು ನಮ್ಮ ನಮ್ಮ ಕಾರ್ಯದಲ್ಲಿ ತೊಡಗಿದ್ದೇವೆ. ಅವರು ಅವರ ಕುಟುಂಬದವರನ್ನು ಬಿಟ್ಟು ಅಲ್ಲಿ ಹೋಗಿ ಸೇವೆ ಮಾಡುತ್ತಿರುವುದನ್ನು ನೋಡಿದರೆ ನಮ್ಮ ರಾಜ್ಯದಲ್ಲಿ ಸರ್ಕಾರಿ ನೌಕರಿದಾರರು ಎಷ್ಟರ ಮಟ್ಟಿಗೆ ಅವರವರ ಕರ್ತವ್ಯಗಳನ್ನು ಪ್ರಾಮಾಣಿಕವಾಗಿ ಮಾಡುತ್ತಿದ್ದಾರೆ? ಅವರಿಗೆ ವರ್ಗಾವಣೆಯಾದಾಗ ಅವರ ಕುಟುಂಬದವರನ್ನು ಬಿಟ್ಟು ಬೇರೆ ಸ್ಥಳಗಳಿಗೆ ಹೋಗಿ ಕರ್ತವ್ಯ ಮಾಡುವಂತಹ ಮನೋಭೂಮಿಕೆಯನ್ನು ಅವರು ಪಡೆದಿಲ್ಲ. ಇವತ್ತು ಈ ದೇಶದಲ್ಲಿ ಇದ್ದು, ಬೇರೆ ಭಾಗಕ್ಕೆ ಹೋಗಿ ಜನರ ಸೇವೆ, ದೇಶದ ಸೇವೆಯನ್ನು ಮಾಡಬೇಕಾಗಿರುವುದು ನಮ್ಮ ಕರ್ತವ್ಯ ಎನ್ನುವ ಮನೋಭಾವನೆ ನಮ್ಮ ಸರ್ಕಾರಿ ನೌಕರರಲ್ಲಿ ಬರಬೇಕು. ಇವತ್ತು ನಾವೆಲ್ಲರೂ ದೇಶ ಪ್ರೇಮದ ಬಗ್ಗೆ ಮಾತನಾಡುತ್ತಿದ್ದೇವೆ. ನಾವೆಲ್ಲರೂ ನಮ್ಮ ನಮ್ಮ ಆತ್ಮ ಶೋಧನೆಯನ್ನು ಮಾಡಿಕೊಳ್ಳಬೇಕು.

ಇವತ್ತು ಶ್ರೀಯುತ ಲಾಲ್ ಬಹದ್ದೂರ್ ಶಾಸ್ತ್ರಿಯವರು ಅಂದು ವೀರಯೋಧರು ಯುದ್ಧದಲ್ಲಿ ತೊಡಗಿದ್ದಂಥ ಸಂದರ್ಭದಲ್ಲಿ "ಜೈ ಜವಾನ್-ಜೈ ಕಿಸಾನ್" ಎನ್ನುವ ಘೋಷಣೆಯನ್ನು ಮಾಡಿದರು. ಇವತ್ತಿನ ದಿವಸ "ಜೈ ಜವಾನ್" ಎಂದರೆ ಅವರೇ ನಮ್ಮ ದೇಶವನ್ನು ಸಂರಕ್ಷಣೆ ಮಾಡುವಂಥವರು. ಅದೇ ಪ್ರಕಾರ ನಮಗೆ ಅನ್ನ ಕೊಡುವಂಥ ರೈತನನ್ನು ಕೂಡ "ಜೈ ಕಿಸಾನ್" ಎಂದೇ ಘೋಷಣೆ ಮಾಡಿದರು. ಇವತ್ತು ಇವರಿಬ್ಬರೂ ಮಾಡುವಂಥ

ಕಾರ್ಯವನ್ನು ನಾವೆಲ್ಲರೂ ಸ್ಮರಿಸಿಕೊಳ್ಳಬೇಕಾಗಿದೆ. ನಾವುಗಳು ನಮ್ಮ ನಮ್ಮ ಕರ್ತವ್ಯಗಳಲ್ಲಿ ಅಥವಾ ಜನತೆಗೆ ಈ ದೇಶ ಪ್ರೇಮವನ್ನು ಹುಟ್ಟಿಸುವಲ್ಲಿ ನಾವು ಎಷ್ಟರ ಮಟ್ಟಿಗೆ ಪ್ರಯತ್ನವನ್ನು ಮಾಡುತ್ತಿದ್ದೇವೆಂಬ ಬಗ್ಗೆ ನಾವೆಲ್ಲರೂ ಆತ್ಮಶೋಧನೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ನಮ್ಮಿಂದ ಮುಂದಿನ ಜನಾಂಗಕ್ಕೆ ಒಳ್ಳೆಯ ಕೊಡುಗೆಯನ್ನು ಕೊಡಬೇಕಾದರೆ, ದೇಶ ಪ್ರೇಮವನ್ನು ತೋರಿಸಬೇಕಾದರೆ ಅದು ನಮ್ಮಿಂದ ಪ್ರಾರಂಭವಾಗಬೇಕಾಗಿದೆ. ಅದಕ್ಕೆ ಇವತ್ತು ಕಾರ್ಗಿಲ್ ಯುದ್ಧದಲ್ಲಿ ಮಡಿದಂಥ ವೀರ ಯೋಧರನ್ನು ಸ್ಮರಿಸಿಕೊಂಡು, ಅವರು ಮಾಡಿದಂಥ ಸೇವೆಯನ್ನು, ಅವರು ದೇಶಕ್ಕೆ ತಂದು ಕೊಟ್ಟ ಜಯವನ್ನು ಸ್ಮರಿಸಿಕೊಳ್ಳುತ್ತಿದ್ದೇವೆ. ಇವತ್ತಿನ ದಿವಸ ನಾವುಗಳೆಲ್ಲಾ ಈ ದೇಶವನ್ನು ಸಂರಕ್ಷಣೆ ಮಾಡುವುದಕ್ಕೆ, ಈ ದೇಶದ ಪಾಲುದಾರರಾದ ನಾವುಗಳೆಲ್ಲಾ ನಮ್ಮ ನಮ್ಮ ಕರ್ತವ್ಯಗಳನ್ನು ಎಷ್ಟರ ಮಟ್ಟಿಗೆ ಪ್ರಾಮಾಣಿಕವಾಗಿ ನೆರವೇರಿಸುತ್ತಿದ್ದೇವೆ. ನಾವೆಲ್ಲರೂ ದೇಶ ಪ್ರೇಮವನ್ನು ಪಡೆದಿದ್ದೇವೆ. ನಮ್ಮ ಮೂಲಕ ಮುಂದಿನ ಪೀಳಿಗೆಗೆ ಏನು ಕೊಡುತ್ತಿದ್ದೇವೆಂಬ ಬಗ್ಗೆ ನಾವೆಲ್ಲರೂ ಆತ್ಮ ಶೋಧನೆಯನ್ನು ಮಾಡಿಕೊಳ್ಳಬೇಕು. ಇವತ್ತಿನ ದಿವಸ ಆ ಎಲ್ಲಾ ಕುಟುಂಬಗಳಿಗೆ ಮಾನ್ಯ ಮುಖ್ಯಮಂತ್ರಿಯವರು ಏನು ಘೋಷಣೆಯನ್ನು ಮಾಡಿ, ಅವರ ಕುಟುಂಬದವರಿಗೆ ಸಹಾಯ ಮಾಡುವಂಥದ್ದು, ವಿದ್ಯಾಭ್ಯಾಸದಲ್ಲಿ ಮುಂದುವರೆಯುವುದಕ್ಕೆ ಆ ಕುಟುಂಬಗಳ ಸಂರಕ್ಷಣೆಗೆ ಏನು ಘೋಷಣೆಯನ್ನು ಮಾಡಿದ್ದಾರೆ, ಅದು ಸೂಕ್ತವಾದದ್ದು. ಇನ್ನೂ ಹೆಚ್ಚಿನ ಸೇವೆಯನ್ನು ಮಾಡುವುದಕ್ಕೆ ನಾವೆಲ್ಲಾ ವೀರ ಯೋಧರಿಗೆ, ಆ ಕುಟುಂಬಗಳಿಗೆ ಶಕ್ತಿಯನ್ನು ಕೊಡಬೇಕು. ದೇಶವನ್ನು ಬೆಳಸಬೇಕೆಂಬ ದೃಷ್ಟಿಯಲ್ಲಿ ತಾವು ತಂದಿರುವ ಸಂತಾಪ ಸೂಚನೆಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ದಿವಂಗತರಾದ ಶ್ರೀ ಪ್ರಭಾಕರ ರಾವ್ ತೇಲ್ಕರ್ ಹಾಗೂ ಕಾರ್ಗಿಲ್ ಯುದ್ಧದಲ್ಲಿ ಮಡಿದ ವೀರಯೋಧರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತೂ ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು: ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿ ಕೊಡಲಾಗುವುದು. ಈಗ ಒಂದು ಪ್ರಕಟಣೆ ಇದೆ.

2. ಪ್ರಕಟಣೆ

ವಿಷಯ: ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶ

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು 2009ನೇ ಸಾಲಿನ ಕರ್ನಾಟಕ ಅರಣ್ಯ ತಿದ್ದುಪಡಿ ವಿಧೇಯಕವನ್ನು ದಿನಾಂಕ 24–7–2009ರಂದು ಯಾವುದೇ ತಿದ್ದುಪಡಿಗಳಿಲ್ಲದೇ ಅಂಗೀಕರಿಸಲಾಗಿದೆಯೆಂದು ತಿಳಿಸಿರುತ್ತಾರೆ.

ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳನ್ನು ಮಾನ್ಯ ಮುಖ್ಯಮಂತ್ರಿಯವರು ಸಭೆಯ ಮುಂದಿಡುವುದು.

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು): ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ಭಾರತ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 31ನೇ ಮಾರ್ಚ್ 2008ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡರುವ ಪಂಚಾಯತ್ ರಾಜ್ ಸಂಸ್ಥೆಗಳ ಲೆಕ್ಕ ಪರಿಶೋಧನಾ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

4. ನಿಯಮ 60ರ ಅಡಿಯಲ್ಲಿ
ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ವಿಷಯ: ದಿನಾಂಕ 25–6–2009ರಂದು ರಾಜ್ಯ ಸರ್ಕಾರದ ಆದೇಶದ ಮೇರೆಗೆ ಮುಖ್ಯ ಕಾರ್ಯದರ್ಶಿಯವರು ಹೊರಡಿಸಿರುವ ಸುತ್ತೋಲೆಯ ಬಗ್ಗೆ

ಅಧ್ಯಕ್ಷರು: ಈಗ ಬೇಡಿಕೆಗಳ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡಬಹುದಲ್ಲಾ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ನನ್ನದು ಒಂದು ನಿಲುವಳಿ ಸೂಚನೆ ಇದೆ. ನಾನು ತಮಗೆ ಮನವರಿಕೆ ಮಾಡುತ್ತೇನೆ. ಆನಂತರ ತಾವು ಏನು ಮಾಡಬೇಕೆಂದು ನಿರ್ಧಾರ ಮಾಡಿ.